ಶ್ರೀ ಎಸ್.ಮುನಿಶ್ಯಾಮಪ್ಪ: ಇವರು ಆಮೇಲೆ ಪೊಲೀಸ್‌ನವರಿಗೆ ಕಂಪ್ಲೇಂಟನ್ನು ಕೊಟ್ಟರು. ಮೊದಲೇ ಕೊಡುವುದಕ್ಕೆ ಬರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 20ನೇ ತಾರೀಖಿನವರೆಗೂ ಪೋಲೀಸರು ಮಧ್ಯೆ ಪ್ರವೇಶ ಮಾಡಿಲ್ಲ. ಆ ಜನಾಂಗದವರೇನೂ ಅಲ್ಲ. ಆ ಜನಾಂಗದವರು ನ್ಯಾಯ ಪಂಚಾಯಿತಿ ಮಾಡುವುದಕ್ಕೆ ಯಾರೂ ಕೂಡ ಅದಕ್ಕೆ ಒಪ್ಪಿಲ್ಲ.

ಛೇರ್ಮನ್: ಮಾನ್ಯ ರೆಡ್ಡಿಯವರೇ, ಕುಳಿತುಕೊಳ್ಳಿ. ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು. ಈಗ ಮಾನ್ಯ ಯಡಿಯೂರಪ್ಪನವರು.

8. ನಿರ್ಣಯಗಳು

ಮಂಡನೆ, ಚರ್ಚೆ ಮತ್ತು ಅಂಗೀಕಾರ

ಅ) ರೈತರ ರಾಷ್ಟ್ರೀಕೃತ ಬ್ಯಾಂಕುಗಳ ಸಲದ ಮೇಲಿನ ಬಡ್ಡಿಯನ್ನು ಶೇ.6ಕ್ಕೆ ನಿಗಧಿ ಮಾಡುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಒಂದು ರೀತಿ ನಿನ್ನೆ ಸಭಾಧ್ಯಕ್ಷರ ಕೊಠಡಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಸಹಕಾರ ಸಚಿವರು, ಈ ಭಾಗದಲ್ಲಿರುವಂಥ ಎಲ್ಲಾ ವಿರೋಧಿ ಪಕ್ಷದ ಮುಖಂಡರು ಒಟ್ಟಾಗಿ ಸೇರಿದಾಗ ರಾಜ್ಯದ ರೈತರೇನು 31.03.2004 ರೊಳಗೆ ಸಾಲವನ್ನು ಪಡೆದಿದ್ದರು, ಅವರೆಲ್ಲರ ಬಡ್ಡಿಯನ್ನು ಮನ್ನಾ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಿ ಸರ್ಕಾರ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ನಾನು ಮತ್ತೆ ಅದರ ಬಗ್ಗೆ ಪ್ರಸ್ತಾಪವನ್ನು ಮಾಡುವುದಿಲ್ಲ. ಆ ಸಂದರ್ಭದಲ್ಲಿ ನಾನು ಏವರಕ್ಕೆ ಆಮೇಲೆ ಹೋಗುತ್ತೇನೆ. ಎರಡು ನಿರ್ಣಯವನ್ನು ಇವತ್ತು ಸರ್ವಾನುಮತದಿಂದ ಪಾಸು ಮಾಡಬೇಕೆನ್ನುವ ದೃಷ್ಟಿಯಿಂದ ಚರ್ಚೆಯಾದ ಮೇಲೆ ಇದನ್ನು ತಂದಿದ್ದೇನೆ. ನಾನು ಒಂದೇ ಒಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವಂಥದ್ದು. ಇವತ್ತು ಈ ದೇಶದ ಪ್ರಧಾನಿಯವರೇನೇ ಮೊನ್ನೆ ದೆಹಲಿಯಲ್ಲಿ ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. "ಉತ್ಪಾದನಾ ಇಳಿಕೆ ದೇಶದ ಆರ್ಥಿಕ ಪ್ರಗತಿಗೆ ತೊಡಕಾಗಿರುವ ಹಿನ್ನೆಲೆಯಲ್ಲಿ ಉತ್ಪಾದನೆ ದ್ವಿಗುಣಗೊಳಿಸಲು ರಾಜ್ಯಗಳು ಮಹತ್ವಾಂಕ್ಷೆ ಯೋಜನೆಗಳನ್ನು ರೂಪಿಸಬೇಕು" ಎಂದು ಹೇಳಿ ಸ್ವತಃ ಪ್ರಧಾನಿಯವರು ಮೊನ್ನೆ ದೆಹಲಿಯಲ್ಲಿ ಎಲ್ಲಾ ಮುಖ್ಯಮಂತ್ರಿಗಳ ಸಭೆಯಲ್ಲಿ ಹೇಳಿದ ಮಾತನ್ನು ಸಹಾ ಇವತ್ತು ನಾವು ನೆನಪನ್ನು ಮಾಡಿಕೊಳ್ಳಬೇಕಾಗುತ್ತದೆ.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಆ ಮಾತನ್ನು ಹೇಳಿದ್ದರು. ನಾನು ಇವತ್ತೇನು ನಾವು ಸರ್ವಾನುಮತದಿಂದ ಒಂದು ನಿರ್ಣಯವನ್ನು ಮಾಡುತ್ತಿದ್ದೇವೆ, ಇದು ಕೇವಲ ರೈತರ ಬಗ್ಗೆ ನಮಗೆ ಅನುಕಂಪ ಇದೆ ಎಂದು ಹೇಳಿ ಜಗಜ್ಜಾಹೀರು ಮಾಡಿಕೊಂಡು ಪ್ರಚಾರ ಮಾಡಿಕೊಳ್ಳುವುದಕ್ಕೋಸ್ಕರ ಅಲ್ಲ. ಅತ್ಯಂತ ಪ್ರಾಮಾಣಿಕವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತಂದು ನಮ್ಮ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯೂ ಸಹಾ ನಮ್ಮ ರೈತರು ಸಾಲವನ್ನು ತೆಗೆದುಕೊಳ್ಳುತ್ತಾರೆ, ಅವರಿಗೆ ಈ ಬಡ್ಡಿ ಮನ್ನಾ ಮಾಡುವಂಥ ಆರು ಪರ್‌ಸೆಂಟ್ ಬಡ್ಡಿ ಯೋಜನೆಯಲ್ಲಿ ಅವರಿಗೆ ಅನುಕೂಲ ಮಾಡಿಕೊಡುವಂಥ ಹಿನ್ನೆಲೆಯಲ್ಲಿ ನಾನು ಈ ವಿಷಯವನ್ನು ಮಂಡನೆ ಮಾಡುತ್ತೀದ್ದೇನೆ. ಅದನ್ನು ಸರ್ವಾನು ಮತದಿಂದ ನಿರ್ಣಯವಾದ ಮೇಲೆ ನಾನು ಆ ವಿಷಯಕ್ಕೆ ಹೋಗುತ್ತೇನೆ. ನಿರ್ಣಯ ಹೀಗಿದೆ.

"ರಾಜ್ಯದ ರೈತರ ಚಟುವಟಿಕೆಗಳಿಗೆ ಪಡೆಯುವ ಕೃಷಿ ಸಾಲದ ಮೇಲೆ ಶೇ.6 ರಂತೆ ಬಡ್ಡಿ ದರ ನಿಗಧಿಪಡಿಸಲಾಗಿರುತ್ತೆ. ಈ ಸೌಲಭ್ಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗಲಿದ್ದು, ಶೇ.40 ಕ್ಕೂ ಹೆಚ್ಚು ರೈತರು ಕೃಷಿ ಚಟುವಟಿಕೆಗಳ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಅಲ್ಲಿನ ಸಾಲದ ಮೇಲಿನ ಬಡ್ಡಿ ದರವು ಶೇ.8 ರಿಂದ 10 ರವರೆಗೆ ಇರುತ್ತದೆ. ಈ ತಾರತಮ್ಯವನ್ನು ಸರಿಪಡಿಸುವ ಸಂಬಂಧ ರಾಷ್ಟ್ರೀಕೃತ ಬ್ಯಾಂಕುಗಳ ಸಾಲದ ಮೇಲಿನ ಬಡ್ಡಿ ದರವನ್ನು ಶೇ.6ಕ್ಕೆ ನಿಗಧಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲು ಈ ಸದನವು ನಿರ್ಣಯಿಸುತ್ತದೆ."

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ನಿರ್ಣಯ ಪಾಸಾದಮೇಲೆ ನಾನು ಎರಡನೇ ನಿರ್ಣಯಕ್ಕೆ ಹೋಗುತ್ತೇನೆ. ಆಮೇಲೆ ಅದರ ಉದ್ದೇಶವನ್ನು ನಾನು ತಿಳಿಸುವ ಪ್ರಯತ್ನವನ್ನು ಮಾಡುತ್ತೇನೆ. ಇದು ಮೊದಲನೆಯದು. ನಾನು ಒಂದು ವಿನಂತಿಯನ್ನು ಮಾಡುವುದು ಎಂದು ಹೇಳಿದರೆ ಇವತ್ತು ರಾಜ್ಯದಲ್ಲಿ ನಾಲ್ಕು ವರ್ಷದಿಂದ ಭೀಕರ ಬರಗಾಲ ಇದೆ. ಇಂಥ ಒಂದು ಸಂದರ್ಭದಲ್ಲಿ ಸರ್ಕಾರ ಆ ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಸಹಕಾರಿ ಸಂಘಗಳಿಂದ ಪಡೆದಿರುವ ಸಾಲದ ಮೇಲೆ ಬಡ್ಡಿಯನ್ನು ಮನ್ನಾ ಮಾಡುವಂಥ ಒಂದು ಯೋಜನೆಯನ್ನು ಜಾರಿಗೆ ತಂದು ರಾಜ್ಯದ ರೈತರಿಗೆ ಒಂದು ಅನುಕೂಲವನ್ನು

ಮಾಡಿಕೊಟ್ಟಿದ್ದೀರಿ. ಇವತ್ತು ಅದೇ ರೈತ ಯಾರು ಬರಗಾಲಕ್ಕೆ ನಾಲ್ಕು ವರ್ಷದಿಂದ ಸತತವಾಗಿ ಸಿಕ್ಕಿದ್ದಾನೆ, ಅವನು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲವನ್ನು ಪಡೆದಿದ್ದಾನೆ. ಅವನಿಗೆ ಈ ಸವಲತ್ತುಗಳು ಸಿಕ್ಕಿಲ್ಲ. ಇವತ್ತು ಅದನ್ನು ಒತ್ತಾಯ ಮಾಡುವಂಥ ಪ್ರಯತ್ನ ನಮ್ಮ ಕಡೆಯಿಂದ ಆಗಲಿಲ್ಲ. ಇವತ್ತು ನಮ್ಮ ಪ್ರಧಾನಿಯವರು ಈ ಬಗ್ಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚೆಯಾದ ಕಾಲದಲ್ಲಿ ಬಹುಶಃ ಆಂಧ್ರಪ್ರದೇಶದ ಮುಖ್ಯಮಂತ್ರಿಗಳೊಬ್ಬರು ಮಾತ್ರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 6 ಪರ್‌ಸೆಂಟ್ ಬಡ್ಡಿಗೆ ಸಾಲ ಸಿಗುವ ವ್ಯವಸ್ಥೆಯಾಗಬೇಕು ಎಂದು ಹೇಳಿ ಒತ್ತಾಯ ಮಾಡಿರುವಂಥದ್ದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇವತ್ತು ನಾನು ವಿನಂತಿ ಮಾಡುವಂಥಾದ್ದು ಸಹ ಒಂಭತ್ತು – ಒಂಭತ್ತೂವರೆಗೆ ಪರ್ಸೆಂಟ್ ಬಡ್ಡಿಯನ್ನು ರೈತರಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅವರ ಕೃಷಿ ಸಾಲದ ಮೇಲೆ ಹಾಕುತ್ತಿದ್ದಾರೆ. ಇವತ್ತು ವಾಹನ ಬೇಕೆಂದರೆ ಐದಾರು ಪರ್ಸೆಂಟ್‌ಗೆ ಶ್ರೀಮಂತರಿಗೆ ಸಾಲ ಸಿಗುವ ವ್ಯವಸ್ಥೆ ಇದೆ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡುವುದು, ಯಾವ ಒಂದು ಈ ಬರಗಾಲಕ್ಕೆ ತುತ್ತಾದ ರೈತನ ಪರವಾಗಿ ನಾವು ಬಡ್ಡಿಯನ್ನು ಮನ್ನಾ ಮಾಡುವ ಯೋಜನೆಯನ್ನು ಜಾರಿಗೆ ತಂದಿದ್ದೇವೋ ಅಂಥಾ ಸಂದರ್ಭದಲ್ಲಿ ರೈತರಿಗೆ ಇವತ್ತು 6 ಪರ್‌ಸೆಂಟ್ ಬಡ್ಡಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೂ ಸಾಲ ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕಾದುದು ನಮ್ಮ ಕರ್ತವ್ಯ. ಇಲ್ಲವೆಂದರೆ ನಾವು ಸರ್ಕಾರಿ ಸಂಘಗಳಲ್ಲಿ ನೂರಕ್ಕೆ ನೂರು ಜನ ರೈತರಿಗೆ ನಾವು ಸಾಲವನ್ನು ಕೊಡುತ್ತೇವೆಂದು ಹೇಳಿದಾಗ ಈ ಪ್ರಶ್ನೆ ಬರುವುದಿಲ್ಲ. ಅನಿವಾರ್ಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹೋಗುತ್ತಾರೆ. ಅವನು ಅದೇ ಬೆಳೆಯನ್ನು ಬೆಳೆದಿರುತ್ತಾನೆ. ಅವನು ಅದೇ ಪ್ರಕೃತಿ ವಿಕೋಪಕ್ಕೆ ತುತ್ತಾಗಿರುತ್ತಾನೆ. ಅಲ್ಲೇನು ಇಳುವರಿ ಬರುತ್ತೆ, ಅದೇ ಇಳುವರಿ ಇವನಿಗೂ ಬಂದಿರುತ್ತೆ. ಆದರೆ ಅವನಿಗೆ ಬಡ್ಡಿ ಮನ್ನಾ ಆಗುತ್ತೆ ಅಥವಾ ಶೇಕಡ 6 ರಂತೆ ಬಡ್ಡಿ ಸಿಗುತ್ತೆ. ಆದರೆ ಇಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇವತ್ತು 8,9,10 ಪರ್‌ಸೆಂಟ್‌ಗೆ ಸಾಲ ತೆಗೆದುಕೊಳ್ಳುವ ದುಸ್ಥಿತಿಗೆ ಬಂದಿದ್ದಾನೆ. ಆ ಹಿನ್ನೆಲೆಯಲ್ಲಿ ನಾನು ಇವತ್ತು ಈ ನಿರ್ಣಯವನ್ನು ಮಂಡನೆ ಮಾಡುತ್ತಿದ್ದೇನೆ. ಇವರ ಬಗ್ಗೆ ನಮ್ಮ ಕೆಲವು ಶಾಸಕರುಗಳು ಮಾತನಾಡಿದ ಮೇಲೆ ಎರಡನೆಯ ನಿರ್ಣಯವನ್ನು ಮಂಡನೆ ಮಾಡುತ್ತೇನೆ.

ಮೊದಲು ಇದು ಚರ್ಚೆಯಾದ ಮೇಲೆ ನಿರ್ಣಯವನ್ನು ಮಾಡಬೇಕಾಗುತ್ತದೆಂದು ಕಾಣುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರೇನು ನಿರ್ಣಯವನ್ನು ಮಂಡಿಸಿದ್ದಾರೆ, ನಾನು ಅದನ್ನು ಅನುಮೋದಿಸಿ ಸಣ್ಣ ಪುಟ್ಟ ಬದಲಾವಣೆಗಳು ಇದರಲ್ಲಿ ಆಗಬೇಕಾಗುತ್ತದೆ. ಬಹಳ effective ಆಗಿ ಇದು ಆಗಬೇಕೆಂದು ಒಂದೇ ಮಾತು ಇದರಲ್ಲಿ ಸೇರಿಸುತ್ತೇನೆ. "ಶೇಕಡ ನಲವತಕ್ಕೂ ಹೆಚ್ಚು ರೈತರು ಕೃಷಿ ಚಟುವಟಿಕೆಗಳ ಸಲುವಾಗಿ" ಎನ್ನುವುದರ ಬದಲು "ರೈತರು" ಎಂದು ಹೇಳೋಣ ಸಾಕು ಎಂದು ನನ್ನ ಭಾವನೆ. ಸಾಲದ ಮೇಲಿನ ಬಡ್ಡಿದರವು ಎಂಟರಿಂದ ಹತ್ತರವರೆಗೆ ಇರುತ್ತದೆ ಎಂದು ನಾವು ಹೇಳುವುದು ಬೇಡ. Let us not go to that details. ಮಾನ್ಯ ದೇಶಪಾಂಡೆಯವರೆ, ಇದೊಂದು ಅಮೆಂಡ್ ಮಾಡಿ ನಾನು ಈ ನಿರ್ಣಯವನ್ನು ಅನುಮೋದಿಸುತ್ತಿದ್ದೇನೆ. ಶೇ.40 ಕ್ಕೂ ಹೆಚ್ಚು ರೈತರು ಎಂದು ನಾವು restrict ಮಾಡುವುದು ಬೇಡ. ರೈತರು ಎಂದು ಹೇಳಿ ಅಲ್ಲಿಗೆ ನಿಲ್ಲಿಸೋಣ. ಆಮೇಲೆ ಶೇ.8 ರಿಂದ 10 ರವರೆಗೆ ಇರುತ್ತದೆ ಎನ್ನುವುದು ಬೇಡ. 10 ಇದೆಯೋ, 9 ಇದೆಯೋ, 12 ಇದೆಯೋ, 18 ಇದೆಯೋ, 15–18 ಪರ್‌ಸೆಂಟ್ ವರೆಗೂ ಇದೆ. ಈ details ನಮಗೆ ಬೇಡ ನಾವೇನು ಈಗ ಸನ್ಮಾನ್ಯ ಎಡಿಯೂರಪ್ಪ ನವರು ಮೂವ್ ಮಾಡಿದ್ದಾರೆ, ಶೇ.6 ರಂತೆ ಬಡ್ಡಿ ನಿಗಧಿ ಪಡಿಸಲಾಗಿರುತ್ತೆ. ಈ ಸೌಲಭ್ಯವು ರಾಜ್ಯಸರ್ಕಾರದ ವ್ಯಾಪ್ತಿಗೆ ಬರುವ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗಲಿದ್ದು ರೈತರು ಕೃಷಿ ಚಟುವಟಿಕೆಗಳ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಅಲ್ಲಿನ ಸಾಲದ ಮೇಲಿನ ಬಡ್ಡಿದರವನ್ನು ಶೇ.6ಕ್ಕೆ ನಿಗಧಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲು ಸದನವು ನಿರ್ಣಯಿಸುತ್ತದೆ ಎಂದು ಹೇಳಿ ಒಂದು ಅಮೆಂಡ್‌ಮೆಂಟನ್ನು ಮಾಡಿಕೊಳ್ಳಬೇಕು. ಜೊತೆಗೆ ಗ್ರಾಮೀಣ ಬ್ಯಾಂಕ್ RRB's ಏನು ಇದೆ, ಅದೊಂದನ್ನು ಇದಕ್ಕೆ ಸೇರಿಸಿಕೊಳ್ಳಬೇಕು. ರಾಷ್ಟ್ರೀಕೃತ ಬ್ಯಾಂಕಿನ ಜತೆಗೆ RRB's ಮತ್ತೆ ಗ್ರಾಮೀಣ ಬ್ಯಾಂಕ್ಸಿಗೂ ಇದು ಅನ್ವಯವಾಗಬೇಕು. ಎಂದು ಹೇಳಿ ಒಂದು ತಿದ್ದುಪಡಿಯನ್ನು ಇದರಲ್ಲಿ ತೆಗೆದುಕೊಂಡು ಬಂದು ನಾನು ಈ

ನಿರ್ಣಯವನ್ನು ಅನುಮೋದಿಸುತ್ತೇನೆ. ಇದನ್ನು ಮಾನ್ಯ ಯಡಿಯೂರಪ್ಪನವರು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಅದಾದ ನಂತರ ನಾನು ಕೂಡ ಆಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ತರಬೇಕು ಎಂದು ಹೇಳಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಮತ್ತು ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದಂಥ ಮಾತುಕತೆಯ ಸಂದರ್ಭದಲ್ಲಿ ಸರ್ಕಾರ ಒಮ್ಮತದ ನಿರ್ಣಯವನ್ನು ಮಾಡಬೇಕೆಂದು ಹೇಳಿ ಆಯಿತು. ಈ ನಿರ್ಣಯದ ಜೊತೆಗೆ ನಾನೊಂದು ಸಲಹೆಯನ್ನು ಮಾಡುತ್ತೇನೆ. ಇದು ಸರ್ವಾನುಮತದಿಂದ ನಿರ್ಣಯವಾಗುತ್ತದೆ. ಸ್ವಲ್ಪ ಸಣ್ಣಪುಟ್ಟ ತಿದ್ದುಪಡಿ ಮಾಡಿ ಸರ್ವಾನುಮತದಿಂದ ಆಗುತ್ತದೆ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಏನೆಂದರೆ ಈ ನಿರ್ಣಯವನ್ನು ತಾವು ಮಾಡುವುದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಒಂದು ಸರ್ವಪಕ್ಷಗಳ ನಿಯೋಗ ಹೋಗಬೇಕು. ಏಕೆಂದರೆ ಬರೀ ನಿರ್ಣಯವನ್ನು ಮಾಡಿ ಇಲ್ಲಿ ಕೂರುವುದಲ್ಲ. ನಿರ್ಣಯದ ಜೊತೆಗೆ ನಮ್ಮ ಸದನ ರೈತರ ಪರವಾಗಿ ಐತಿಹಾಸಿಕವಾದ ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಒತ್ತಡ ತರುವುದಕ್ಕೆ ಈ ನಿರ್ಣಯ ಕೇಂದ್ರ ಸರ್ಕಾರವೆಂದರೆ ಪ್ರಧಾನಮಂತ್ರಿ ಮತ್ತು ಹಣಕಾಸಿನ ಸಚಿವರನ್ನು ಭೇಟಿ ಮಾಡುವುದಕ್ಕೆ ತಮ್ಮ ನಾಯಕತ್ವದಲ್ಲಿಯೇ ಅಲ್ಲಿಗೆ ಹೋಗತಕ್ಕ ನಿರ್ಣಯ ಆಗಬೇಕು. ಅದಕ್ಕೆ ನಿರ್ಣಯ ಮಂಡನೆಯಾದ ಮೇಲೆ ಈ ತೀರ್ಮಾನಕ್ಕೆ ತಾವು ಉತ್ತರವನ್ನು ಕೊಡುವಾಗ ದಯವಿಟ್ಟು ಇದನ್ನು ಒಪ್ಪಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ನಿನ್ನೆ ಚರ್ಚೆ ನಡೆದ ಹಿನ್ನೆಲೆಯಲ್ಲಿ ಇಡೀ ದೇಶದಲ್ಲೇ ಮಾದರಿಯಾಗಬೇಕು. ಕರ್ನಾಟಕ ರಾಜ್ಯದಲ್ಲಿ ರೈತರಿಗೆ 6 ಪರ್‌ಸೆಂಟ್ ಇಂಟರೆಸ್ಟ್ ಕೊಡಬೇಕೆಂದು ಹೇಳಿ ಸರ್ಕಾರ ಏನು ತೀರ್ಮಾನವನ್ನು ಮಾಡಿದೆ, ಇದು ದೇಶದಲ್ಲೇ ಮೊದಲನೆಯದು. ಈ ರೀತಿಯಾದಂಥ ಸೌಲಭ್ಯ ಕೇವಲ ಸಹಕಾರಿ ಬ್ಯಾಂಕುಗಳಿಗೆ ಮಾತ್ರವಿದೆ, ಅದರ ಬದಲು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳಿಗೂ ಇದು ಅನ್ವಯವಾಗಬೇಕು ಎನ್ನತಕ್ಕ ರೀತಿಯಲ್ಲಿ ನಾವು ಈ ನಿರ್ಣಯವನ್ನು ಮಾಡಬೇಕೆಂದು ಚರ್ಚೆಯಾಯಿತು. ಏಕೆಂದರೆ ರಾಷ್ಟ್ರೀಕೃತ ಬ್ಯಾಂಕುಗಳು ಕೇಂದ್ರ

ಸರ್ಕಾರದ ಅಧೀನದಲ್ಲಿರತಕ್ಕದ್ದು. ಆದರೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಕೆಲವು ಹಣಕಾಸು ಸಂಸ್ಥೆಗಳು ಇದ್ದಾವೆ. ಅವುಗಳಿಗೂ ಇದು ಅನ್ವಯವಾಗಬೇಕು, ಸರ್ಕಾರಿ ಸ್ವಾಮ್ಯದಲ್ಲಿರುವ ಹಣಕಾಸು ಸಂಸ್ಥೆಗಳಿಗೂ ಇದು ಅನ್ವಯವಾಗಬೇಕು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಗೂ ಇದು ಅನ್ವಯವಾಗಬೇಕು. ಕೇವಲ ಸಹಕಾರಿ ಸಂಘಗಳಿಂದ ಕೊಡತಕ್ಕ ಸಾಲಗಳ ಮೇಲೆ ಮಾತ್ರ 6 ಪರ್‌ಸೆಂಟ್ ಆಗುವುದು ಬೇಡ. ಸುಮಾರು ಜನ ರೈತರು ಕೆ.ಎಸ್.ಎಫ್.ಸಿ. ಅದರಲ್ಲಿ ಇದರಲ್ಲೆಲ್ಲಾ ಸಾಲ ತೆಗೆದುಕೊಂಡಿರುತ್ತಾರೆ. ಅದಕ್ಕೂ 6 ಪರ್‌ಸೆಂಟ್ ನಲ್ಲಿ ಕೊಡಬೇಕು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲೂ 6 ಪರ್‌ಸೆಂಟ್ ಕೊಡಬೇಕು. ಇದೊಂದು ಮಹತ್ತರವಾದಂಥ ನಿರ್ಣಯ. ಏಕೆಂದರೆ ಬಹುಶಃ ಇಡೀ ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಇಂಥ ಒಂದು ನಿರ್ಣಯವನ್ನು ನಮ್ಮ ಸದನದಲ್ಲಿ ಮಾಡುತ್ತಿದ್ದೇವೆ. ಇದು ಇಡೀ ದೇಶಕ್ಕೆ ಮಾದರಿಯಾಗುತ್ತದೆ. ನಾವೆಲ್ಲರೂ ಹೆಮ್ಮೆಪಡಬೇಕಾಗಿರತಕ್ಕ ವಿಚಾರ. ಹಾಗಾಗಿ ಇದರಲ್ಲಿ ಒಂದು ಅಮೆಂಡ್‌ಮೆಂಟ್ ಏನು ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ **'40 ಪರ್‌ಸೆಂಟ್'** ಎಂಬುದನ್ನು **'ರೈತರು'** ಎಂದು ಹೇಳತಕ್ಕದನ್ನು ಸೇರಿಸಬೇಕು, ಮತ್ತು ಪರ್‌ಸೆಂಟೇಜ್ **8–10** ಎಂದು ಹೇಳುವುದು ಬೇಡ, ಅದನ್ನು ತೆಗೆದು ಈ ನಿರ್ಣಯವನ್ನು ಅಂಗೀಕಾರ ಮಾಡಬೇಕು. ಅದರ ಬಗ್ಗೆ ಚರ್ಚೆ ಮಾಡಲು ಅನುಮತಿ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, "ರಾಜ್ಯದ ರೈತರ ಚಟುವಟಿಕೆಗಳಿಗೆ ಪಡೆಯುವ ಕೃಷಿ ಸಾಲದ ಮೇಲೆ ಶೇ.6 ರಂತೆ ಬಡ್ಡಿ ದರ ನಿಗಧಿಪಡಿಸಲಾಗಿರುತ್ತೆ. ಈ ಸೌಲಭ್ಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗಲಿದ್ದು ಹೆಚ್ಚು ರೈತರು ಕೃಷಿ ಚಟಡುವಟಿಕೆಗಳ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಅಲ್ಲಿನ ಸಾಲದ ಮೇಲಿನ ಬಡ್ಡಿಯ ದರವು ಹೆಚ್ಚು ದುಬಾರಿಯಾಗುರವುದರಿಂದ ಈ ತಾರತಮ್ಯವನ್ನು ಸರಿಪಡಿಸುವ ಸಂಬಂಧ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳ ಸಾಲದ ಬಡ್ಡಿಯ ದರವನ್ನು ಶೇ.6 ಕ್ಕೆ ನಿಗಧಿ

ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲು ಈ ಸದನವು ನಿರ್ಣಯಿಸುತ್ತದೆ." ಈ ರೀತಿ ಆಗಬಹುದೇ ?

ಶ್ರೀ ಆರ್.ವಿ. ದೇಶ್‌ಪಾಂಡೆ (ಸಹಕಾರ ಸಚಿವರು) : ಇತರೆ ಹಣಕಾಸು ಸಂಸ್ಥೇ ಎಂಬಲ್ಲಿ ಗ್ರಾಮೀಣ ಬ್ಯಾಂಕುಗಳೆಂದು ಹೇಳಿದರೆ ಕ್ಲಿಯರ್ ಆಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದರ ಜೊತೆಗೆ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ ಬರುತ್ತದೆಯೆ ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಲ್ಲೂ ಸಾಲವನ್ನು ತೆಗೆದಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆರ್.ಆರ್.ಬಿ. ಮತ್ತು ಗ್ರಾಮೀಣ ಬ್ಯಾಂಕ್ ಎಂದರೆ ಸಾಕು, ಇತರೆ ಎಂದು ಬೇಡ, ಕೆ.ಎಸ್.ಎಫ್.ಸಿ ಗೆಲ್ಲಾ ನಾವು ತರಲು ಆಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ರೈತರು ಪಡೆದಿರುವ ಕೃಷಿ ಸಾಲದ ಬಗ್ಗೆ ಮಾತ್ರವಲ್ಲವೆ? only ಕೃಷಿ ಸಾಲ ಅಲ್ಲವೆ ?

ಶ್ರೀ ಆರ್.ವಿ.ದೇಶ್‌ಪಾಂಡೆ : ಹೌದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಮತ್ತು ಪರಿಸರ ಸಚಿವರು) : ಮಾನ್ಯ ಯಡಿಯೂರಪ್ಪನವರೇ, ಅದರಲ್ಲಿ ನ್ಯಾಷನಲೈಸ್ಡ್ ಬ್ಯಾಂಕ್, ಶೆಡ್ಯೂಲ್ಡ್ ಬ್ಯಾಂಕ್, ಆರ್.ಆರ್.ಬಿ ಗಳು ಎಂದು ಹಾಕಿದರೆ ಎಲ್ಲವೂ ಬರುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಶೆಡ್ಯೂಲ್ಡ್ ಬ್ಯಾಂಕ್ ಮತ್ತು ಆರ್.ಆರ್.ಬಿ ಗಳು.

ಶ್ರೀ ಆರ್.ವಿ.ದೇಶ್‌ಪಾಂಡೆ (ಸಹಕಾರ ಸಚಿವರು) : ಮಾನ್ಯ ಜಯಪ್ರಕಾಶ್‌ರವರೆ, ಕರ್ನಾಟಕ ಸರ್ಕಾರ ನಮ್ಮ ರಾಜ್ಯದ ರೈತರಿಗೆ ಕೃಷಿ ಸಾಲ 6 ಪರ್‌ಸೆಂಟ್ ನಲ್ಲಿ ಕೊಡುತ್ತಿದೆ, ಅದು short term ಅಥವಾ credit long term credit ಇರಬಹುದು, ಹಾಗಾಗಿ ನಮ್ಮ ರೆಸೊಲ್ಯೂಶನ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವಾಗ ಅದು ರೈತರ ಪರವಾಗಿ ರೈತರಿಗೆ ಯಾವ ಪ್ರಕಾರ ನಾವು ಸಾಲ ಕೊಡುತ್ತಿದ್ದೇವೆ ಅದೇ ಪ್ರಕಾರ ಕೃಷಿ ಸಾಲ, ಅದು ನ್ಯಾಷನಲೈಸ್ಡ್ ಬ್ಯಾಂಕ್ಸ್ ಇರಬಹುದು ಶೆಡ್ಯೂಲ್ಡ್ ಬ್ಯಾಂಕ್ಸ್ ಇರಬಹುದು ಅಥವಾ ಗ್ರಾಮೀಣ ಬ್ಯಾಂಕುಗಳಿರಬಹುದು, ಎಂಬ ರೀತಿಯಲ್ಲಿ ಬರಬೇಕು.

ಶ್ರೀ ಎಸ್.ಎಸ್.ಪಾಟೀಲ್ (ಮಂದರಗಿ): ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ವಿಚಾರವನ್ನು ಇವತ್ತು ಮಂಡಿಸಿದ್ದಾರೆ. ನಿಜವಾಗಿಯೂ ಇವತ್ತೇನು ಈ ನಿರ್ಣಯವನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ನಿರ್ಣಯದ ಮೂಲಕವಾಗಿ ಅವರು ಏನೋ 40 ಪರ್‌ಸೆಂಟ್ ರೈತರಿಗೆ ಮಾತ್ರ ಅನುಕೂಲವಾಗುತ್ತದೆ. 70 ಜನ ರೈತರು ಇದರಿಂದ ಹೊರಗೆ ಇದ್ದಾರೆ. ಈ ಸಾಲದ ಶೂಲಕ್ಕೆ ಸಿಕ್ಕಿ ಇದಕ್ಕಿಂತ ತೊಂದರೆಯಲ್ಲಿರುವ ರೈತರಿದ್ದಾರೆ. ಆ ಕಾರಣಕ್ಕಾಗಿ ಸಮಗ್ರವಾಗಿ ವಿಚಾರ ಮಾಡಿ ಇಡೀ ಎಲ್ಲಾ ರೈತರಿಗೆ ಅನುಕೂಲವಾಗುವಂಥ ಒಂದು ತಿದ್ದುಪಡಿಯನ್ನು ತರಲು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಒಂದು ಚಿಂತನೆ ಮಾಡಿ. ಆ ರೀತಿ ತಿದ್ದುಪಡಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ (ಸಹಕಾರ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಗೌರವಾನ್ವಿತ ವಿರೋಧ ಕ್ಷದ ನಾಯಕರೇನು ರೆಸೊಲ್ಯೂಶನ್ ನಮ್ಮ ಮುಂದಿಟ್ಟಿದ್ದಾರೆ ಅದನ್ನು ಎಲ್ಲರೂ ಪಕ್ಷಾತೀತವಾಗಿ ಸ್ವಾಗತವನ್ನು ಮಾಡುತ್ತಿದ್ದೇವೆ. ಈಗಾಗಲೇ ಹಿರಿಯರಾದಂಥ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಮಾನ್ಯ ಗೌರವಾನ್ವಿತ ಸಭಾಧ್ಯಕ್ಷರ ಕೊಠಡಿಯಲ್ಲಿ ಈ ವಿಷಯ ಬಂದಾಗ ತಕ್ಷಣ ಸರ್ಕಾರ ಇದಕ್ಕೆ ಒಪ್ಪಿಕೊಂಡಿದೆ. ಬೇಕಾದರೆ ಮುಖ್ಯಮಂತ್ರಿಯವರಿಂದ ರೆಸೊಲ್ಯೂಶನ್‌ನ್ನು ಬೇಕಾದರೆ ಮೂವ್ ಮಾಡಿಸುತ್ತೇವೆಂದೂ ಹೇಳಿದೆ. ಆಗ ತಮ್ಮ ಸಲಹೆ ಬಂತು, ವಿರೋಧ ಪಕ್ಷದ ನಾಯಕರು ಈಗಾಗಲೆ ಮೂವ್ ಮಾಡುತ್ತೇವೆಂದು ಹೇಳಿದ ಮೇಲೆ ಅದನ್ನು ನಾವು ಒಪ್ಪಿಕೊಂಡೆವು. ಹಾಗಾಗಿ ಇವತ್ತು ಇದು ಒಂದು ನಿರ್ಣಯ, ನಾವೆಲ್ಲರೂ ಬಹಳ ಅಭಿಮಾನ ಮತ್ತು ಸ್ವಾಭಿಮಾನದಿಂದ ಸ್ವೀಕಾರ ಮಾಡಬೇಕಾಗುತ್ತದೆ. ಸದನ ಇದನ್ನು ಒಪ್ಪಿಕೊಂಡ ನಂತರ ಇದು ಇಡೀ ರಾಷ್ಟ್ರಕ್ಕೇ ಮಾದರಿಯಾಗಬೇಕಾಗುತ್ತದೆ. ಮತ್ತು ನಾನು ಬಹಳ ವಿನಯದಿಂದ ಹೇಳುತ್ತೇನೆ, ಇವತ್ತು ಗೌರವಾನ್ವಿತ ಮುಖ್ಯಮಂತ್ರಿಗಳಾದಂಥ ಮಾನ್ಯ ಧರ್ಮಸಿಂಗ್‌ರವರ ನಾಯಕತ್ವದಲ್ಲಿ ಕರ್ನಾಟಕದ ಈ ಸಮ್ಮಿಶ್ರ ಸರ್ಕಾರ ರೈತರ ಪರವಾಗಿ ಹಲವಾರು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದೆ. ಈ ಎಲ್ಲಾ ಯೋಜನೆಗಳು ಇವತ್ತು ಇಡೀ ರಾಷ್ಟ್ರಕ್ಕೇ ಮಾದರಿಯಾಗಿದೆ. 6 ಪರ್‌ಸೆಂಟ್ ಬಡ್ಡಿ ಕೊಡುವುದು, ತಾವೇನು ಒಪ್ಪಿಕೊಂಡಿರಿ, ತಾವೇನು ಮೆಚ್ಚುತ್ತಿದ್ದೀರಿ ಇವತ್ತು ಇದು ರಾಷ್ಟ್ರಕ್ಕೇ

ಮಾದರಿಯಾಗಬೇಕಾಗಿದೆ. ಇಡೀ ರಾಷ್ಟ್ರದಲ್ಲಿ ಇದು ಜಾರಿಗೆ ಬರಬೇಕಾಗಿದೆ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ, ನ್ಯಾಷನಲ್ ಬ್ಯಾಂಕ್ಸ್‌ನಲ್ಲಿ ಆರ್.ಆರ್.ಬಿ ಗಳಲ್ಲಿ ಶೆಡ್ಯೂಲ್ಡ್ ಬ್ಯಾಂಕ್ಸ್‌ನಲ್ಲಿ ಇದು ಜಾರಿಗೆ ಬರಬೇಕಾಗಿದೆ. ಈಗಾಗಲೇ ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಮೊನ್ನೆ ನ್ಯಾಷನಲ್ಸ್ ಡೆವಲಪ್‌ಮೆಂಟ್ ಕೌನ್ಸಿಲ್‌ನ ಮೀಟಿಂಗ್ ಆದಾಗ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ಪ್ರಧಾನ ಮಂತ್ರಿಗಳ ಜೊತೆ ನಾನೂ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಕೃಷಿ ಸಚಿವರಾದ ಮಾನ್ಯ ಶರದ್ ಪವಾರ್‌ರವರೂ ಇದನ್ನು ಮೆಚ್ಚಿದ್ದಾರೆ. ಅಂದರೆ ಅವರೂ ಸಹ ಇದನ್ನು ಯಾವ ಪ್ರಕಾರದಲ್ಲಿ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದಾರೆ. ಹಾಗಾಗಿ ಈ ನಿರ್ಣಯದಿಂದ ಹೆಚ್ಚಿನ ಶಕ್ತಿ ಕೇಂದ್ರ ಸರ್ಕಾರಕ್ಕೂ ಬರಬಹುದು ಎಂದು ನಾನು ಭಾವಿಸುತ್ತೇನೆ. ಆ ದೃಷ್ಟಿಯಿಂದ ಈ ನಿರ್ಣಯವೇನಿದೆ ಅದನ್ನು ಎಲ್ಲರೂ ಸ್ವಾಗತ ಮಾಡಬೇಕು. ಎಲ್ಲರೂ ಇದಕ್ಕೆ ಒಪ್ಪಿಕೊಳ್ಳಬೇಕೆಂದು ಸದನದ ಎಲ್ಲಾ ಸದಸ್ಯರಲ್ಲೂ ವಿನಂತಿ ಮಾಡುತ್ತಿದ್ದೇನೆ. ಮತ್ತು ಈ ನಿರ್ಣಯವನ್ನು ಮಾಡಲು ನಮಗೆ ಅಧಿಕಾರವಿದೆ. ಏಕೆಂದರೆ ಅದನ್ನು ನಾವು ಮಾಡಿದ್ದೇವೆ. ಒಂದು ವೇಳೆ ಅದನ್ನು ನೀವು ಮಾಡಿ ಎಂದು ಹೇಳಿದ್ದರೆ ತಪ್ಪಾಗಬಹುದು. ಕರ್ನಾಟಕ ಸರ್ಕಾರ ಇವತ್ತು 6 ಪರ್‌ಸೆಂಟ್ ನಲ್ಲಿ ಬಡ್ಡಿಯನ್ನು ಕೊಡುತ್ತಿದೆ. ಹಾಗಾಗಿ ಈ ನಿರ್ಣಯ ಮಾಡಲು ನಮಗೆ ಅಧಿಕಾರವಿದೆ, ನೈತಿಕ ಅಧಿಕಾರ ಇದೆ, ಲೀಗಲ್ ಅಧಿಕಾರವೂ ಇದೆ, ಹಾಗಾಗಿ ಇದನ್ನು ಸ್ವಾಗತ ಮಾಡುತ್ತಾ ನಾವೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತೇವೆ, ಇದನ್ನು ಸರ್ವಾನುಮತದಿಂದ ಪಾಸ್ ಮಾಡಬೇಕೆಂದು ನಾನು ಕೋರುತ್ತೇನೆ.

ಛೇರ್ಮನ್ : ಕರೆಕ್ಷನ್ ಮಾಡಿರುವುದನ್ನು ಹೇಳಿಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ, **"ರಾಜ್ಯದ ರೈತರ ಚಟುವಟಿಕೆಗಳಿಗೆ ಪಡೆಯುವ ಕೃಷಿ ಸಾಲದ ಮೇಲೆ ಶೇಕಡ 6 ರಂತೆ ಬಡ್ಡಿ ದರ ನಿಗಧಿಪಡಿಸಲಾಗಿರುತ್ತದೆ. ಈ ಸೌಲಭ್ಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗಲಿದ್ದು, ಹೆಚ್ಚು ರೈತರು ಕೃಷಿ ಚಟುವಟಿಕೆಗಳ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಾಗೂ ಇತರೆ ಹಣಕಾಸು ಸಂಸ್ಥೆಗಳು ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು**

ಪಡೆಯುತ್ತಿದ್ದಾರೆ. ಅಲ್ಲಿನ ಸಾಲದ ಮೇಲಿನ ಬಡ್ಡಿಯ ದರದ ಈ ತಾರತಮ್ಯವನ್ನು ಸರಿಪಡಿಸುವ ಸಂಬಂಧ ರಾಷ್ಟ್ರೀಕೃತ ಬ್ಯಾಂಕುಗಳು, ಷೆಡ್ಯೂಲ್ಡ್ ಬ್ಯಾಂಕುಗಳು ಹಾಗೂ ಗ್ರಾಮೀಣ ಬ್ಯಾಂಕುಗಳ (ಆರ್.ಆರ್.ಬಿ) ಸಾಲದ ಮೇಲಿನ ಬಡ್ಡಿ ದರವನ್ನು ಶೇ.6 ಕ್ಕೆ ನಿಗಧಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಲು ಈ ಸದನವು ನಿರ್ಣಯಿಸುತ್ತದೆ."

(ನಿರ್ಣಯ ಮಂಡಿಸಲ್ಪಟ್ಟಿತು)

ಶ್ರೀ ಆರ್.ವಿ.ದೇಶ್‌ಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ರೆಸೊಲ್ಯೂಶನ್ ಒಪ್ಪಿಕೊಂಡಿದ್ದೇವೆ. ಎಲ್ಲಾದರೂ comma, fullstop ನ್ನು ಸ್ವಲ್ಪ change ಮಾಡಿಕೊಳ್ಳೋಣ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿ) : ತಾವು ಈಗ ಯಾವ ನಿರ್ಣಯವನ್ನು ಮಂಡಿಸುತ್ತಿದ್ದೇರಿ, ಒಂದು ವೇಳೆ ನಿರ್ಣಯವನ್ನು ನಾವು ಮಂಡಿಸಿದ್ದರೆ, ನೀವು ಒಪ್ಪುತ್ತಿದ್ದಿರೋ ಇಲ್ಲವೋ ಗೊತ್ತಿಲ್ಲ. ನಿಮ್ಮ ನಿರ್ಣಯವನ್ನು ನಾವು ಒಪ್ಪುತ್ತೇವೆ. ನಿರ್ಣಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸುತ್ತಾರೆಂದು ನಮ್ಮ ಸಹಕಾರ ಸಚಿವರು ಹೇಳಿದ್ದಾರೆ, ಅದನ್ನು ನಾವು ಒಪ್ಪಿದ್ದೇವೆ. ಇದರಲ್ಲಿ ಒಂದನ್ನು ತಾವು ತಪ್ಪು ತಿಳಿಯಬಾರದು. ಏನೆಂದರೆ, ಈ ನಿರ್ಣಯಗಳೆಲ್ಲವನ್ನೂ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರನ್ನು ಕೇಳಿ ಮಾಡತಕ್ಕಂಥಾದ್ದಲ್ಲ. ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿ, ಶ್ರೀನಿವಾಸ ಗೌಡ, ಹೆಚ್.ಡಿ.ರೇವಣ್ಣ, ಜೆ.ಸಿ.ಮಾಧುಸ್ವಾಮಿ, ಹೆಚ್.ಕೆ.ಪಾಟೀಲರು ಇವರೆಲ್ಲರೂ ಸಹಕಾರಿ ಕ್ಷೇತ್ರದಲ್ಲಿ ತಜ್ಞರಾಗಿರುವುದರಿಂದ ಎಲ್ಲರನ್ನೂ ಕೇಳಿ ಮಾಡಬೇಕು. ಇದರಲ್ಲಿ ಷೆಡ್ಯೂಲ್ಡ್ ಬ್ಯಾಂಕ್ ಮತ್ತು ಕಮರ್ಷಿಯಲ್ ಬ್ಯಾಂಕ್‌ಗಳನ್ನು this is the first in the country. ಮೊನ್ನೆ ಶರದ್ ಪವಾರ್‌ರವರೂ ಕೂಡ ಮಾತನಾಡುತಾ, 'ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ನಾನು ಮಹಾರಾಷ್ಟ್ರ ರಾಜ್ಯದಲ್ಲೂ ಮಾಡಿಲ್ಲ, ಮತ್ತು ರಾಷ್ಟ್ರದ ಬೇರಾವ ರಾಜ್ಯದವರೂ ಕೂಡ ಮಾಡಿಲ್ಲ. ಇವೊತ್ತು ನೀವು ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಶೇ.6ರ ಬಡ್ಡಿ ದರದಲ್ಲಿ ಸಹಕಾರ ಸಂಘ–ಸಂಸ್ಥೆಗಳ ಮೂಲಕ ಸಾಲ ಸೌಲಭ್ಯ ಒದಗಿಸಿಕೊಡುವ ಮೂಲಕ ರೈತರಿಗೆ ಒಳ್ಳೆಯದನ್ನು ಮಾಡುತ್ತಿದ್ದೀರಿ' ಎಮದು ಹೇಳಿದ್ದಾರೆ. ಅಲ್ಲದೆ, ಮೊನ್ನೆ ಜರುಗಿದ ಎನ್.ಡಿ.ಸಿ. ಮೀಟಿಂಗ್‌ನಲ್ಲೂ ಕೂಡ 'ರಾಜ್ಯದಲ್ಲಿ ರೈತರಿಗೆ ಶೇ.6 ರ ಬಡ್ಡಿ ದರದಲ್ಲಿ ಸಾಲ

ಸೌಲಭ್ಯ ಒದಗಿಸಿಕೊಡುವ ಕೆಲಸ ಪ್ರಾರಂಭ ಮಾಡಿದ್ದೇವೆ. ನೀವೂ ಕೂಡ ಕೃಷಿ ಕ್ಷೇತ್ರದ ಬೆಳವಣಿಗೆಗೆ ಹೆಚ್ಚು ಸಹಾಯ ಮಾಡಬೇಕು' ಎಂದು ಹೇಳಿದ್ದೇವೆ. ನಾವು ಕೈಗೊಂಡ ಈ ನಿರ್ಣಯದಿಂದಾಗಿ ಕೇಂದ್ರದ ಹಣಕಾಸು ಮಂತ್ರಿ, ಕೃಷಿ ಮಂತ್ರಿ ಮತ್ತು ಪ್ರಧಾನ ಮಂತ್ರಿಗಳ ಬಳಿಗೆ ಹೋಗಿ ಮಾತನಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿರುವ ಸಮ್ಮಿಶ್ರ ಸರ್ಕಾರವು ವಿರೋಧ ಪಕ್ಷದವರು ಮಂಡಿಸಿರುವ ನಿರ್ಣಯವನ್ನು ಒಪ್ಪಿದೆ. ಈ ನಿರ್ಣಯವು ರೈತರ ಹಿತದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಂಡರೆ, ನಿರ್ಣಯದ ಡ್ರಾಫ್ಟ್ ಕುರಿತಂತೆ ಕಮರ್ಷಿಯಲ್ ಬ್ಯಾಂಕ್ ಆಗಲಿ, ನ್ಯಾಷನಲೈಸ್ಡ್ ಬ್ಯಾಂಕುಗಳಾಗಲಿ, ಅದರ ಬಗ್ಗೆ ನನಗೂ ಕೂಡ ಹೆಚ್ಚಿನ ಮಾಹಿತಿ ಇಲ್ಲ ಆದಕಾರಣ, ನಾಳೆ ಸಹಕಾರ ಇಲಾಖೆಯ ಕಾರ್ಯದರ್ಶಿಗಳು, ಕಾನೂನಿಗೆ ಸಂಬಂಧಿಸಿದ ಅಧಿಕಾರಿಗಳೆಲ್ಲರೂ ಒಟ್ಟಾಗಿ ಸೇರಿ ಒಳ್ಳೆಯ ನಿರ್ಣಯ ತಂದು, ಯಾವುದೇ ಬೇಧ-ಭಾವವಿಲ್ಲದೆ, ಎಲ್ಲರೂ ಕೂಡ ಅವಿರೋಧವಾಗಿ ರಾಜ್ಯದ ರೈತರ ಹಿತದೃಷ್ಟಿಯಿಂದ ಇದೊಂದು ಐತಿಹಾಸಿಕ ನಿರ್ಣಯ ಏನಿದೆ ಇದನ್ನು ಮಂಜೂರು ಮಾಡೋಣ ನಿರ್ಣಯವನ್ನು ಯಾವ ರೀತಿ ಪ್ರಸ್ತಾಪಿಸಬೇಕೆಂಬ ಬಗ್ಗೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ಅನಂತರ ನಿರ್ಣಯ ಸಿದ್ದಪಡಿಸಿ ಕಳುಹಿಸಿಕೊಡುತ್ತೇವೆ.

ಚೇರ್ಮನ್ : ಮಾನ್ಯ ಸದಸ್ಯರು ಮಂಡಿಸಿರುವ ನಿರ್ಣಯವನ್ನು ನಾನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ನಿರ್ಣಯ ಈ ರೀತಿ ಇದೆ; 'ರಾಜ್ಯದ ರೈತರ ಚಟುವಟಿಕೆಗಳಿಗೆ.....

ಶ್ರೀ ಬಿ.ಎಸ್.ಯಡಿಯೂರಪ್ಪ : ಮುಖ್ಯಮಂತ್ರಿಗಳೆ, ಈಗ ಏನಾಗಿದೆಯೆಂದರೆ, ತಾವು.....

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಬೇರೆ ಬ್ಯಾಂಕುಗಳೂ ಕೂಡ ಇದರಲ್ಲಿ ಒಳಗೊಳ್ಳುವಂತೆ ಮಾಡುವ ಮೂಲಕ ಒಟ್ಟಾರೆ ರೈತರಿಗೆ ಹಿತವಾಗುವ ರೀತಿಯಲ್ಲಿ ನಿರ್ಣಯ ತಂದರೆ ಸರಿಯಾಗುತ್ತದೆ.....

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವು ಈ ನಿರ್ಣಯವನ್ನು ಅಂಗೀಕರಿಸಿದರೆ word by word ಅದೇ ಬರುತ್ತದೆ. ಅದಕ್ಕೋಸ್ಕರ, ನಾಳೆ ಅದನ್ನು ಮಂಡಿಸೋಣವೆಂದರೆ, ನನ್ನದೇನೂ ಅಭ್ಯಂತರವಿಲ್ಲ. ಆದರೆ,

ಪ್ರಶ್ನೆಯೇನೆಂದರೆ, ನಿನ್ನೆ ದಿವಸ ಚರ್ಚೆ ಮಾಡಿ, ಡ್ರಾಫ್ಟ್ ಮಾಡಿ, ಅದು ಸರಿ ಇದೆಯೆಂದು ಎಲ್ಲಾ ಪ್ರತಿಪಕ್ಷದವರು ಸಹಿ ಮಾಡಿರುವುದು.

ಶ್ರೀ ಧರ್ಮಸಿಂಗ್ : ತಾವು ಮಾಡಿದ್ದು ಅಷ್ಟೇ ಸಾಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಇದರಲ್ಲಿ ರಾಷ್ಟ್ರೀಕೃತ ಬ್ಯಾಂಕ್, ಷೆಡ್ಯೂಲ್ಡ್ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕುಗಳು ಸೇರಿದರೆ sufficient ಆಗಿತ್ತದೆ.

ಶ್ರೀ ಎಸ್.ಎಸ್.ಪಾಟೀಲ್ : ಯಡಿಯೂರಪ್ಪನವರೇ, ಈಗ ಏನಾಗಿದೆಯೆಂದರೆ, ನಾನು ಹೇಳಿದ್ದು ಯಾರಿಗೂ ಅರ್ಥವಾಗಲಿಲ್ಲ. ಇದರಿಂದ ಸಾಲ ಪಡೆದುಕೊಳ್ಳದಿರುವ ಶೇ.70 ರಷ್ಟು ರೈತರು ಇದರಿಂದ ಹೊರಗುಳಿಯುತ್ತಾರೆ. ಆದುದರಿಂದ, ಸಾಲ ಪಡೆದುಕೊಂಡ ರೈತರಿಗೆ ಮಾತ್ರ ಇದರಿಂದ ಅನುಕೂಲವಾಗುತ್ತದೆ. ಸಾಲ ಪಡೆದುಕೊಳ್ಳದಿರುವ ಇನ್ನೂ ಶೇ,70ರಷ್ಟು ರೈತರಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸಾಲ ಪಡೆದುಕೊಳ್ಳದಿರುವ ರೈತರನ್ನು ತೆಗೆದುಕೊಂಡು ಇಲ್ಲೇನು ಮಾಡುತ್ತೀರಿ? ಇಲ್ಲಿ ನಾವು ನಿರ್ಣಯ ಕೈಗೊಳ್ಳುತ್ತಿರುವ ಉದ್ದೇಶವೇ ಬೇರೆಯಾಗಿದೆ. ಸಾಲ ತೆಗೆದು ಕೊಳ್ಳುವವರ ಬಗ್ಗೆ ನಾವು ಚರ್ಚೆ ಮಾಡುತ್ತಿರುವುದು.

ಶ್ರೀ ಆರ್.ವಿ.ದೇಶಪಾಂಡೇ : ಪಾಟೀಲರೆ, ನಾನು ನಿಮಗೆ ಉತ್ತರಿಸುತ್ತೇನೆ, ನಿಮ್ಮನ್ನು ಸಮಾಧಾನಪಡಿಸುತ್ತೇನೆ. ನಾನು ಹೇಳುವುದನ್ನು ಕೇಳಿ.

ಶ್ರೀ ಎಸ್.ಎಸ್.ಪಾಟೀಲ್ : ನಾನು ಹೇಳಿದ್ದನ್ನು ಕೇಳಿದ ಮೇಲೆ ತಾವು ಉತ್ತರ ಕೊಡಿ. ನಾನು ಹೇಳುತ್ತಿರುವುದೇನೆಂದರೆ, ಈ ನಿರ್ಣಯ ಕೈಗೊಳ್ಳುತ್ತಿರುವುದರ ಜೊತೆಗೆ ತಾವೆಲ್ಲರೂ ಸೇರಿ ಕೇಂದ್ರದ ಹಣಕಾಸು ಮಂತ್ರಿ, ಕೃಷಿ ಮಂತ್ರಿ ಮತ್ತು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದರಿಂದ, ಇದರ ಜೊತೆಗೆ ಈಗ ಇರತಕ್ಕಂಥ ಇನ್‌ಷ್ಯೂರೆನ್ಸ್ ಪದ್ಧತಿ ಸರಿಯಿಲ್ಲ. ಅದರ ಬಗ್ಗೆ ಕೂಡ ಒಂದು ನಿರ್ಣಯ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದಕ್ಕೆ ನಿರ್ಣಯ ಏಕೆ ಮಾಡುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್ : ನಿರ್ಣಯ ಮಾಡಲೇಬೇಕಾಗುತ್ತದೆ. ಇದರ ಬಗ್ಗೆ ನಿಮಗೊಂದು ಉದಾಹರಣೆ ಹೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೇ : ಇದು ವಿಷಯಾನಂತರ.....

ಶ್ರೀ ಎಸ್.ಎಸ್.ಪಾಟೀಲ್ : ಇದು ವಿಷಯಾಂತರವಲ್ಲ. ಈ ವಿಷಯವನ್ನು ತಾವು ನಿರ್ಣಯದಲ್ಲಿ ಸೇರಿಸಿಕೊಳ್ಳಬೇಕು. ತಪ್ಪೇನೂ ಆಗುವುದಿಲ್ಲ. ತಾವು ಮತ್ತೊಂದು ನಿರ್ಣಯವನ್ನು ಮಂಡಿಸಿ.

ಶ್ರೀ ವಾಟಾಳ್ ನಾಗರಾಜ್ : ನಿರ್ಣಯದ ಉದ್ದೇಶ ಏನಿದೆಯೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಹೇಳಿದ್ದಾರೆ. ಮಾನ್ಯ ಚೇರ್ಮನ್‌ರವರೆ, ಈಗ ನಿರ್ಣಯವನ್ನು ಸಭೆಯ ಮತಕ್ಕೆ ಹಾಕಿ. ಮತ್ತೆ ಈ ಕುರಿತು ಚರ್ಚೆಯಾಗುವುದು ಬೇಡ.

ಶ್ರೀ ಆರ್.ವಿ.ದೇಶ್‌ಪಾಂಡೆ (ಸಹಕಾರ ಸಚಿವರು): ಮಾನ್ಯ ಸದಸ್ಯರಾದ ಎಸ್.ಎಸ್.ಪಾಟೀಲರು ಬೆಳೆ ವಿಮೆ ಕುರಿತಂತೆ ಏನು ಪ್ರಸ್ತಾಪಿಸುತ್ತಿದ್ದಾರೆ, ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಬೆಳೆ ವಿಮೆಯಲ್ಲಿ ರೈತರಿಗೆ ಅನ್ಯಾಯವಾಗುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವೊತ್ತಿನ ಬೆಳೆ ವಿಮಾ ಪಾಲಿಸಿಯಿಂದಾಗಿ ರೈತರಿಗೆ ಬಹಳ ಅನ್ಯಾಯವಾಗುತ್ತಿರುವುದನ್ನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆಯೂ ಮಾಡಿ. No problem. ಆದರೆ, ಇವೊತ್ತಿನ ವಿಷಯವೇ ಬೇರೆ ಇದೆ. ಈಗ ಪ್ರಶ್ನೆಯೇನೆಂದರೆ, ಶೇ.30–35 ರಷ್ಟು ರೈತರಿಗೆ ಮಾತ್ರ ಸಾಲ ಸೌಲಭ್ಯ ಸಿಗುತ್ತಿದ್ದು, ಉಳಿದವರಿಗೆ ಸಿಗುತ್ತಿಲ್ಲವೆಂದು ನೀವು ಹೇಳುತ್ತಿದ್ದೀರ. ಹೌದು, ರಾಷ್ಟ್ರದ ಪ್ರಧಾನಮಂತ್ರಿಗಳು ಸಹ 2007–08 ರೊಳಗೆ ಕ್ರೆಡಿಟ್ ರೋಲ್ ಡಬಲ್ ಆಗಬೇಕೆಂದು ಇನ್‌ಸ್ಟ್ರಕ್ಷನ್ ಕಳುಹಿಸಿದ್ದಾರೆ. ಎರಡನೆಯದಾಗಿ, ಶೇ.6 ರಷ್ಟು ಬಡ್ಡಿ ದರ ವಿಧಿಸಿದರೆ ರೈತರು ಆಟೊಮೆಟಿಕಲಿ ಸಾಲ ಸೌಲಭ್ಯ ಪಡೆದು ಕೊಳ್ಳಲು ಪ್ರಾರಂಭಿಸುತ್ತಾರೆ. ಶೇಕಡ 6ರಷ್ಟು ಆದಲ್ಲಿ, ಆಟೊಮೆಟಿಕಲಿ ಕ್ರೆಡಿಟ್ ಹೆಚ್ಚಾಗುತ್ತದೆ. ಇವೊತ್ತು ಕರ್ನಾಟಕದಲ್ಲಿ ನಾವು ಟಾರ್ಗೆಟ್ ಫಿಕ್ಸ್ ಮಾಡಿದ್ದೇವೆ. ಕಳೆದ ವರ್ಷ ನಾವು ಒಳ್ಳೆಯ ಕ್ರೆಡಿಟ್ ಕೊಟ್ಟಿದ್ದು. ಅದಕ್ಕಿಂತಲೂ ಈ ವರ್ಷ ಇನ್ನೂ ಹೆಚ್ಚಿಗೆ ಅಂದರೆ, ಶೇ.30 ರಷ್ಟು ಹೆಚ್ಚಿಗೆ ಕೊಡಬೇಕೆಂದು ಹೇಳಿದ್ದೇವೆ. ಇದು only in the co-operative sector, ಇದಾದರೆ, ನಿಮ್ಮ ಉದ್ದೇಶ ಯಶಸ್ವಿಯಾಗುತ್ತದೆ.

ಛೇರ್ಮನ್: ನಿರ್ಣಯ ಈ ರೀತಿ ಇದೆ.

"ರಾಜ್ಯದ ರೈತರ ಚಟುವಟಿಕೆಗಳಿಗೆ ಪಡೆಯುವ ಕೃಷಿ ಸಾಲದ ಮೇಲೆ ಶೇಕಡ 6ರಂತೆ ಬಡ್ಡಿ ದರ ನಿಗದಿಪಡಿಸಲಾಗಿರುತ್ತದೆ. ಈ ಸೌಲಭ್ಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಹಕಾರ ಬ್ಯಾಂಕುಗಳಿಗೆ ಮಾತ್ರ

ಅನ್ವಯವಾಗಲಿದ್ದು, ಹೆಚ್ಚು ರೈತರು ಕೃಷಿ ಚಟುವಟಿಕೆಗಳ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ, ಷೆಡ್ಯೂಲ್ಡ್ ಬ್ಯಾಂಕುಗಳಿಂದ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ಇಲ್ಲಿನ ಸಾಲದ ಮೇಲಿನ ಬಡ್ಡಿ ದರದ ತಾರತಮ್ಯವನ್ನು ಸರಿಪಡಿಸುವ ಸಂಬಂಧ ರಾಷ್ಟ್ರೀಕೃತ ಬ್ಯಾಂಕುಗಳ, ಷೆಡ್ಯೂಲ್ಡ್ ಬ್ಯಾಂಕುಗಳ ಮತ್ತು ಗ್ರಾಮೀಣ ಬ್ಯಾಂಕುಗಳ ಸಾಲದ ಮೇಲಿನ ಬಡ್ಡಿ ದರವನ್ನೂ ಶೇಕಡ 6ಕ್ಕೆ ನಿಗದಿಪಡಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲು ಈ ಸದನವು ನಿರ್ಣಯಿಸುತ್ತದೆ".

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

(ಆ) ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ಷೆಡ್ಯೂಲ್ಡ್ ಬ್ಯಾಂಕುಗಳಿಂದ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಪಡೆದಿರುವ ರೈತರಿಗೂ ಕೃಷಿ ಸಾಲವನ್ನು ವಿಸ್ತರಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಎರಡನೆಯ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ನಿರ್ಣಯ ಏನೆಂದರೆ,

"ಕರ್ನಾಟಕ ರಾಜ್ಯವು ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲ ಅನುಭವಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು 31.3.2004ರವರೆಗೆ ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನ ಸಹಕಾರಿ ಕ್ಷೇತ್ರದ ಬ್ಯಾಂಕುಗಳೂ ಸೇರಿದಂತೆ ಮನ್ನಾ ಮಾಡಿರುತ್ತದೆ. ಈ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ, ಷೆಡ್ಯೂಲ್ಡ್ ಬ್ಯಾಂಕುಗಳಿಂದ ಮತ್ತು ಗ್ರಾಮೀಣ ಬ್ಯಾಂಕುಳಿಂದ ಪಡೆದಿರುವ ರೈತರಿಗೂ ಕೃಷಿ ಸಾಲಕ್ಕೂ ವಿಸ್ತರಿಸಲು ಕೇಂದ್ರ ಸರ್ಕಾರವನ್ನು ಕೋರುವಂತೆ ಈ ಸದನವು ನಿರ್ಣಯಿಸುತ್ತದೆ".

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಚೇರ್ಮನ್‌ರವರೆ, ಇವೊತ್ತು ಇಡೀ ರಾಜ್ಯದ ರೈತರ ಸಾಲದ ಮೇಲಿನ ಬಡ್ಡಿಯನ್ನು 31.03.04 ರವರೆಗೆ ಸರ್ಕಾರ ಮನ್ನಾ ಮಾಡಿದೆ.

ಶ್ರೀ ಆರ್.ವಿ.ದೇಶ್‌ಪಾಂಡೆ : ಅದು 31.3.05 ಎಂದಾಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲ. 31.03.2005 ಅಲ್ಲ ನೀವು ಬೆಳಿಗ್ಗೆಯಿಂದಲೂ ಅದೇ ಕನ್‌ಫ್ಯೂಸ್ ಮಾಡುತ್ತಿದ್ದೀರಿ.